Reg. No. | | | | | | | | | |

# BSCKALN 201/FNDKALN 201/BSAKALN 201/BFTKALN 201/ BHSKALN 201/BSHKALN 201/BFDKALN 201/BIDKALN 201

**II Semester B.Sc./B.Sc. (FND)/B.Sc. (A & VE)/B.Sc. (FT)/B.Sc. (HS)/B.Sc. (Home Science)/B.Sc. (FD)/B.Sc. (ID & D)**
**Examination, September 2022**
**(NEP-2020) (2021-22 Batch Onwards)**
**KANNADA**
**Kannada Language (AECC)**

Time : 2 Hours Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಅಮೃತಮತಿಯ ವಿಕೃತ ಪ್ರಣಯ ಜನ್ನನ ಕಾವ್ಯದಲ್ಲಿ ಹೇಗೆ ಚಿತ್ರಣಗೊಂಡಿದೆ ?

**ಅಥವಾ**

ಜನಪದರ ಸೃಜನಶೀಲ ಪ್ರತಿಭೆ 'ಭೀಷ್ಮರಿಗೆ ಶ್ಯಾಪ' ಜನಪದ ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

2) ಒಂದು ಹುಡುಗನಿಗೆ ಬಿದ್ದ ಕನಸು ವ್ಯವಸ್ಥೆಯ ಕರಾಳತೆಯನ್ನು ಚಿತ್ರಿಸುವ ಬಗೆ ಹೇಗೆ ? ವಿವರಿಸಿರಿ.

**ಅಥವಾ**

ಆನೆಹಳ್ಳದಲ್ಲಿದ್ದ ಹುಡುಗಿಯರನ್ನು ಪತ್ತೆ ಮಾಡಿದ ರೀತಿಯ ಸ್ವಾರಸ್ಯವನ್ನು ವಿವರಿಸಿರಿ.

3) ದೇವನೂರರ 'ಒಡಲಾಳ' ಕಾದಂಬರಿಯ ಕಥಾವಸ್ತುವನ್ನು ವಿವರಿಸಿರಿ.

**ಅಥವಾ**

ಸಾಕವ್ವನ ಹೋರಾಟದ ಬದುಕು ಕಾದಂಬರಿಯಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ಸರ್ವಜ್ಞನ ತ್ರಿಪದಿಗಳ ಸ್ವಾರಸ್ಯವನ್ನು ಬರೆಯಿರಿ.

**ಅಥವಾ**

ಉಸಿರುಗಟ್ಟಿಸುವ ವಾತಾವರಣದಲ್ಲಿ ಬೆಳೆಯ ಬೇಕಾದ ವಿಷಾದ 'ಮನುಕುಲದ ಕತೆ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

2) ಸಾಹಿತಿಗೆ ದೊರೆಯುವ ಕೀರ್ತಿ ಯಾವ ನೆಲೆಯದ್ದಾಗಿರಬೇಕೆಂದು ಕುವೆಂಪು ಅಭಿಪ್ರಾಯಪಡುತ್ತಾರೆ ? ವಿವರಿಸಿರಿ.

**ಅಥವಾ**

ನಗರ ಬದುಕು ಸೃಷ್ಟಿಸಿದ ಅವಾಂತರಗಳ ಕುರಿತು ಬರೆಯಿರಿ.

3) ಸಾಕವ್ವಳ ಹಟ್ಟಿ ಜಪ್ತಿ ಪ್ರಸಂಗವನ್ನು ನಿರೂಪಿಸಿರಿ.

**ಅಥವಾ**

ಕಡ್ಲೆಕಾಯಿ ಕಳ್ಳನನ್ನು ಹಿಡಿಯಲು ರೇವಣ್ಣ ನಡೆಸಿದ ಯತ್ನ ಹಾಗೂ ಅದರ ಫಲಿತಾಂಶವನ್ನು ತಿಳಿಸಿರಿ.

III. ಕೆಳಗಿನ **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

ಒಲಿಸಿದ ಪೆಣ್ ಪೆರರೊಳ್ ಸಂ
ಚಲಿಸಿದೊಡಿದು ಸುಖಮೆ ಪರಮಸುಖ ಸಂಪದಮಂ
ಸಲಿಸಿ ಸಲೆ ನೆರೆವ ಮುಕ್ತಿಯ
ನೊಲಿಸುವೆನಿನ್ನೊಲ್ಲೆನುಳಿದ ಪೆಂಡಿರ ನಣ್ಪಂ

**ಅಥವಾ**

ಪಡುಗಡಲ ತೆರೆಗಳಲಿ ಪಾದ ತೊಳೆವವಳೆ
ಬೆಟ್ಟ ಬಯಲುಗಳನ್ನು ತೊಟ್ಟು ನಿಂತವಳೆ
ಮಲೆನಾಡ ಶಿಖರದಲಿ ಮಳೆಬಿಲ್ಲ ಮುಡಿದವಳೆ
ಅವ್ವಾ ಅಂದಾಗೊಮ್ಮೆ ಸಾಕಾರಗೊಂಬವಳೆ
ನಗೆಮೊಗದ ಜಗದಂಬೆ ಬೆಳಕಿನ ತಾಯೇ

IV. ಕೆಳಗಿನ **ಎರಡು** ಸಾಲುಗಳ ಸಂದರ್ಭ ಸೂಚಿಸಿ ಅರ್ಥ ವಿಶೇಷತೆಗಳನ್ನು ವಿವರಿಸಿರಿ. **(2×4=8)**

1) ಹರಿ ಕರಿಯನಲ್ಲದಿರಿವುದೆ ನರಿಯಂ

2) ಭಕ್ತಿಯೆಂಬುದೆ ಬೀಜ ಮುಕ್ತಿಯೆಂಬುದೆ ಫಲವು

3) ಅಲ್ಲಮನೆಂಬ ಎಲ್ಲ ಬಲ್ಲವನೊಬ್ಬನಿದ್ದನಮ್ಮ

4) ಭಾರತದ ಒಲುಮೆ ಅಂಬೇಡ್ಕರ್ ಪ್ರತಿಮೆ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) 'ಮುಕ್ತಿಯನೊಲಿಸುವೆನ್' ಕಾವ್ಯ ಭಾಗದ ಕರ್ತೃ ಯಾರು ?

2) ಬಸವಣ್ಣನವರ ಅಂಕಿತ ಯಾವುದು ?

3) ಡಾ. ಪಿ. ಕೆ. ರಾಜಶೇಖರರವರ ಅಭಿನಂದನಾ ಗ್ರಂಥದ ಹೆಸರೇನು ?

4) ಭಾರತದ ಒಲುಮೆ ಯಾರು ?

5) 'ಆನೆಹಳ್ಳದಲ್ಲಿ ಹುಡುಗಿಯರು' ಲೇಖನವನ್ನು ಬಿ.ಜಿ.ಎಲ್. ಸ್ವಾಮಿಯವರ ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?

6) ವಾನಳ್ಳಿಯವರು ಬರೆದು ನಿರ್ದೇಶಿಸಿದ ಯಾವ ಚಿತ್ರ ರಾಷ್ಟ್ರೀಯ ಪುರಸ್ಕಾರ ಪಡೆದಿದೆ ?

7) 'ಒಡಲಾಳ' ಕಾದಂಬರಿಯ ಕರ್ತೃ ಯಾರು ?

8) ಚೆಲುವಮ್ಮನ ಗಂಡನ ಹೆಸರೇನು ?